ಕ್ರಮವನ್ನು ತೆಗೆದುಕೊಳ್ಳಬೇಕು. ಹಾಗೂ ಕೂಡಲೇ ಅದಕ್ಕೆ ಬೇಕಾದಂತಹ ಹಣವನ್ನು ಒದಗಿಸಬೇಕೆಂದು ಸರ್ಕಾರದವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ: ಇದನ್ನು ಪರಿಶೀಲನೆ ಮಾಡಿ ಆಗತ್ಯ ಕ್ರಮ ಕೈಗೊಳ್ಳುತ್ತೇನೆ.

11) ಅರಕಲಗೂಡು ತಾಲ್ಲೂಕಿನ ವೆಂಕಟಿಗುಂಡ್ಲು ಕೊಪ್ಪಳಗ್ರಾಮದಲ್ಲಿ 30X40 ಅಡಿಯ ನಿವೇಶನಗಳನ್ನು 2 ಸಾರಿ ಮಾಡಿ ಇಲ್ಲಿ ಹಣ ದುರಪಯೋಗವಾಗಿರುವುದು.

ಶ್ರೀ ಎ.ಟಿ.ರಾಮಸ್ವಾಮಿ: ನಮ್ಮ ಅರಕಲಗೂಡು ತಾಲ್ಲೂಕಿನ ಚಿಕಳಿ ದಾಖಲೆ ವೆಂಕಟಿಗುಂಡ್ಲು ಕೊಪ್ಪಳ ಗ್ರಾಮದಲ್ಲಿ ಸುಮಾರು 3 ವರ್ಷಗಳ ಹಿಂದೆ ಒಂದು ಭೂಮಿ ಖರೀದಿ ಮಾಡಿ 30X40 ಅಳತೆಯುಳ್ಳ ನಿವೇಶನಗಳನ್ನು ಮಾಡಿದ್ದರು. ಆ ನಿವೇಶನಗಳಿಗೆ ಹಣ ಪಾವತಿ ಆಗಿತ್ತು. ಈಗ ಅದನ್ನು ತಾಲ್ಲೂಕು ಪಂಚಾಯಿತಿಯಿಂದ ಇತ್ತೀಚೆಗೆ 20X30 ಅಳತೆಯುಳ್ಳ ನಿವೇಶನವನ್ನು ಮಾಡಿದರು. ಕಾರಣವೇನೆಂದರೆ ಒಂದು, ನಿವೇಶನಕ್ಕೆ 300 ರೂಪಾಯಿಯವರೆಗೂ ಖರ್ಚು ಹಾಕಬೇಕೆಂದು ಹೇಳಿ ಸರ್ಕಾರದ ಆದೇಶ ಇತ್ತು. ಆ ದುಡ್ಡನ್ನು ತೆಗೆದುಕೊಳ್ಳುವ ಸಲುವಾಗಿ ಮತ್ತೆ 20X30 ಖರ್ಚಾಗಿ ಮತ್ತೆ ಎರಡನೇ ಸಲ ಸೈಟ್ ಫಾರ್ಮೇಷನ್ ಮಾಡಿದ್ದಾರೆ; ಹಣ ಪಾವತಿ ಮಾಡಿದ್ದಾರೆ. ಇಲ್ಲಿ ಅಧಿಕಾರದ ದುರುಪಯೋಗ ಮತ್ತು ಹಣದ ದುರಪಯೋಗವಾಗಿದೆ. ಈ ಬಗ್ಗೆ ನಾನು ಆರ್.ಡಿ.ಪಿ.ಆರ್ ಮಂತ್ರಿಯವರಿಗೂ ಕೂಡ ಒಂದು ಪತ್ರ ದಿನಾಂಕ 1.12.97ರಂದು ಬರೆದೆ. ಮೊದಲು ಆಗಲೇ ನಿವೇಶನ ಮಾಡಿ ದುಡ್ಡು ಖರ್ಚು ಮಾಡಲಾಗಿತ್ತು. ಆದರೆ ಅದೇ ಸ್ಥಳವನ್ನು ಮತ್ತೇ ಪುನಃ ನಿವೇಶನವನ್ನು ಮಾಡಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದರೆ ಅದಕ್ಕೆ ಉತ್ತರ ''ಒಂದೇ ಸ್ಥಳವನ್ನು ಎರಡು ಬಾರಿ ಖರೀದಿಸುವಂತೆ ತೋರಿಸಿ, ಎರಡು ಬಾರಿ ಮೌಲ್ಯವನ್ನು ಪಾವತಿಸಿರುವುದಿಲ್ಲ'' ಎಂದು ಪತ್ರವನ್ನು ಬರೆಯುತ್ತಾರೆ. ನಾವು ಏಕೆ ಪ್ರಸ್ತಾಪ ಮಾಡುತ್ತೇವೆ. ಕಾರ್ಯಕ್ರಮದ ಅನುಷ್ಠಾನದಲ್ಲಿ ಏನು ಲೋಪದೋಷವಾಗಿದೆ ಅದರ ಬಗ್ಗೆ ನಾವು ಸರ್ಕಾರದ ಗಮನವನ್ನು ಸೆಳೆಯತಕ್ಕಂಥಾದ್ದು ನಮ್ಮ ಕರ್ತವ್ಯ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ನಿಮಗೆ ಬಿಟ್ಟಿದೆ. ನೀವು ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲವೆಂದರೆ ನಾವು ಯಾವರೀತಿ ನಡೆದುಕೊಳ್ಳಬೇಕು ಹೇಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ.ಅಧ್ಯಕ್ಷರೇ, ಅಧಿಕಾರಿಗಳ ವರದಿ ಪ್ರಕಾರ ಇಲ್ಲಿ ಎರಡು ಬಾರಿ ಸೈಟ್ ಮಾಡಿಲ್ಲ, ಹಣ ಖರ್ಚು ಮಾಡಿಲ್ಲವೆಂದು ವರದಿ ಇದೆ. ಮಾನ್ಯ ಸದಸ್ಯರು ಅದರ ಬಗ್ಗೆ ಮಾಹಿತಿ ಕೊಟ್ಟರೆ ಸಂಬಂಧಪಟ್ಟವರ ಮೇಲೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅನುಕೂಲವಾಗುತ್ತದೆ.

ಶ್ರೀ ಎ.ಟಿ.ರಾಮಸ್ವಾಮಿ: ನಾನೇ ದುಡ್ಡು ಕೊಟ್ಟಿದ್ದೇನೆ. ಮೊದಲು 30X40 ಅಳತೆಯುಳ್ಳ ನಿವೇಶನವನ್ನು ಮಾಡಿದ್ದರು. ಖಚಿತವಾಗಿ ಗೊತ್ತಿದ್ದೇ ನಾನು

ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಎರಡು ಬಾರಿ ನಿವೇಶನವನ್ನು ಮಾಡಿ ಅದಕ್ಕೆ ಎರಡು ಸಲ ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ವಿಚಾರದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

12) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಅಶೋಕ ಕಾಟ್ವೆ: ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಪ್ರತಿದಿವಸ ನೀರು ಕೊಡುತ್ತೇವೆಂದು ಮಹಾನಗರಸಭೆ ಹೇಳಿದ್ದರೂ ಸಹ ಕಳೆದ 2-3 ತಿಂಗಳಿಂದ ನೀರಿನ ಹಾಹಾಕಾರ ಇದ್ದು, ಅಲ್ಲಿ 15 ದಿವಸದಿಂದ 1 ತಿಂಗಳವರೆಗೆ ನೀರು ಬರುತ್ತಿಲ್ಲ. ಆದುದರಿಂದ ಆಲ್ಲಿನ ಜನ ಖಾಲಿ ಕೊಡಗಳ ಹೋರಾಟ ಹಾಗೂ ರಸ್ತಾರೋಕೋ ಮಾಡುತ್ತಿದ್ದಾರೆ. ಅಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮೂರು ಕಡೆಯಿಂದ ನಾವು ನೀರು ತೆಗೆದುಕೊಳ್ಳುತ್ತೇವೆ ಒಂದು ನೀರು ಸಾಗರದಿಂದ, ಎರಡನೆಯದಾಗಿ ಉಳಕಲ್ಲು, ಮೂರನೆಯದಾಗಿ ಮಲಪ್ರಭಾ ನದಿಯಿಂದ ತೆಗೆದುಕೊಳ್ಳುತ್ತೇವೆ. ಈಗ ನೀರು ಸಾಗರಕ್ಕೆ ಹೋದಬಾರಿ ಸನ್ಮಾನ್ಯ ಬಚ್ಚೇಗೌಡ ಎಕ್ಸ್‌ಪ್ರೆಸ್ ಫೀಡರ್ ಲೈನ್ ಹಾಕುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಇನ್ನೂ ಮಾಡಲಿಲ್ಲ. ಆದುದರಿಂದ ಅಲ್ಲಿ ವಿದ್ಯುತ್ತಿನ ಆಭಾವದಿಂದ ನೀರು ಸಾಗರಕ್ಕೆ ನಮಗೆ ತೊಂದರೆಯಾಗುತ್ತಿದೆ. ಇನ್ನು ಎರಡನೆಯದಾಗಿ ಉಳಕಲ್ಲು ಸಾಗರದಿಂದ ನೀರು ತೆಗೆದುಕೊಳ್ಳುತ್ತಿದ್ದೆವು. ಅಲ್ಲೂ ಸಹ ನೀರು ಕೆಟ್ಟಿದೆ. ಆ ನೀರು ಕುಡಿಯುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದರಿಂದ ಅಲ್ಲಿಯ ನೀರೂ ಸಹ ಬರುತ್ತಿಲ್ಲ. ಆ ನೀರನ್ನು ಸಹ ಆದಷ್ಟು ಬೇಗ ಸರ್ಕಾರದವರು ಪೂರೈಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ ಮಲಪ್ರಭಾ ನೀರು ನಮಗೆ ಬರುತ್ತಿದೆ. ಆ ನೀರೂ ಸಹ ಇವತ್ತಿನ ಮಟ್ಟಿಗೆ ಮೂರು ಸ್ಪೈನಲ್‌ಗಳಿಂದ ಬರುತ್ತಿದೆ. ಒಂದು ಸ್ಪೈನಲ್ ಏನಿದೆ ನೀರಿನಿಂದ ಮೇಲೆ ಬಂದಿದೆ. ಎರಡನೇ ಸ್ಪೈನಲ್ ಏನಿದೆ ಅದು ಒಂದು ಅಡಿ ಮಾತ್ರ ನೀರು ಬಿದ್ದಿದೆ. ಎಂದರೆ ಇನ್ನು 15 ದಿವಸ ಮಾತ್ರ ನೀರು ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆ ಮಾಡಿದೆ. ಇನ್ನು ಮೂರನೇ ಸ್ಪೈನಲ್‌ನಲ್ಲಿ ಈಗಾಗಲೇ ಹೂಳು ತುಂಬಿ ಹೂಳನ್ನು ತೆಗೆಯಲಿಲ್ಲವೆಂದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಒಂದು ನಿಮಿಷದಲ್ಲಿ ಹೇಳಬೇಕು. ಅವರೆಲ್ಲಾ ಹೇಳುತ್ತಾರೆ. ನೀವು ಬಹಳ ಬುದ್ಧಿವಂತರು ಎಂದು. ಹುಬ್ಬಳ್ಳಿ ನಗರದಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳಿ ಮುಗಿಸಬೇಕು.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನುವ ವಿಚಾರ ಪ್ರಸ್ತಾಪ ಮಾಡಿದ್ದಾರೆ.